

12
ನಾವೆಲ್ಲ ಕಡೇಪಕ್ಷ ಅರ್ಧಭಾಗ, ಕಾಲು ಭಾಗವಾದರೂ ನೀರು ತುಂಬಿದ್ದೇವೆ. ಅರ್ಜುನ ತನ್ನ ಕೊಡವನ್ನೇ ಇಲ್ಲಿಗೆ ತರಲಿಲ್ಲ. ಗುರುಗಳ ಪ್ರಿಯ ಶಿಷ್ಯ ಅದೇನು ಮಾಡುತ್ತಾನೋ ನೋಡೋಣ!
13
ಅರ್ಜುನ, ನಿನ್ನ ಕೊಡವೆಲ್ಲಿ?
ಗುರುದೇವ! ನಾನು ಈಗಾಗಲೇ ನನ್ನ ಕೊಡವನ್ನು ನೀರಿನಿಂದ ತುಂಬಿ, ನಿಮ್ಮ ಕೋಣೆಯಲ್ಲಿಟ್ಟು ಬಂದೆ. ಈಗಲೇ ಅದನ್ನು ತರುತ್ತೇನೆ.
14
ಗುರುದೇವ, ಇಲ್ಲಿದೆ!
ಉಳಿದವರಿಗೆ ಸಾಧ್ಯವಾಗದ ಕೆಲಸ ನಿನ್ನಿಂದ ಹೇಗೆ ಸಾಧ್ಯವಾಯಿತು?
ಈ ಕೆಲಸ ಸಾಧ್ಯವೇ ಇಲ್ಲದಿದ್ದರೆ ಇದನ್ನು ನಮಗೆ ನೀವು ಹೇಳಲಾರಿರಿ ಎಂದೇ ನನಗೆ ಅನ್ನಿಸುತ್ತಿತ್ತು. ಹೀಗೆ ಆಲೋಚಿಸುತ್ತಾ ವರುಣ ದೇವತೆಯನ್ನು ಆರಾಧಿಸಿ, ಕೊಡಕ್ಕೆ ಆವಾಹಿಸಬಹುದು ಎಂಬ ಆಲೋಚನೆ ನನಗೆ ಬಂತು. ನಾನು ಹಾಗೆಯೇ ಮಾಡಿದೆ, ಆಗ ವರುಣ ಕೊಡವನ್ನು ನೀರಿನಿಂದ ತುಂಬಿದ.
15
ಗುರು ಹೇಳಿಕೊಟ್ಟ ಪಾಠವನ್ನು ಸ್ವಪ್ರಯತ್ನದಿಂದ ಇನ್ನಷ್ಟು ಚೆನ್ನಾಗಿ ಕಲಿಯುವುದು ಮತ್ತು ಅದರಿಂದ ತನ್ನ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳುವುದು ಉತ್ತಮ ಶಿಷ್ಯನ ಲಕ್ಷಣ. ಅರ್ಜುನ, ನಾವಿಬ್ಬರೂ ಪರಸ್ಪರ ಹೆಮ್ಮೆ ಪಡಬೇಕಾದ ಸಂಗತಿಯಿದು.